## ಇಲ್ಲಿಯವರೆಗೆ



ರೊಬೋಗಳನ್ನು ಪರೀಕ್ಷೆ ನಡೆಸಲಾಗುತ್ತದೆ. ಜೊತೆಗೆ ಕೆಲವು ರೊಬೋಗಳನ್ನು ದುರಸ್ತಿಗೆ ಕಳಿಸಲಾಗುತ್ತದೆ. ಹೀಗೆ ಕಳಿಸುವಾಗ ಆ ಎಲ್ಲ ರೊಬೋಗಳ ಗುರುತಿಸುವಿಕೆ ಸುಲಭವಾಗಲಿ ಎಂದು ಒಂದೊಂದು ನಂಬರ್‌ಗಳನ್ನೂ ಕೊಡಲಾಗುತ್ತದೆ. ಈ ಕಮಾಂಡೋ ರೊಬೋಗಳನ್ನು ನಮ್ಮ ಸುಪರ್ದಿಗೆ ಒಪ್ಪಿಸುವಾಗಲೇ ಅವುಗಳ ಐ.ಡಿ. ಸಂಖ್ಯೆ ಹಾಗೂ 'ಮೇಕ್' ಕುರಿತಾಗಿ ನಮಗೆ ಮಾಹಿತಿ ನೀಡಿದ್ದಾರೆ ಎನ್ನುವ ಹನ್ನಾ ತನ್ನ ಎಂ.ಪಿ. ವಾಕಿಯಲ್ಲಿದ್ದ ಮಾಹಿತಿಯನ್ನು ಶೈನಿಯ ಉಪಕರಣಕ್ಕೆ ರವಾನಿಸುತ್ತಾಳೆ. ಭದ್ರತಾಪಡೆಯ ಮುಖ್ಯಸ್ಥನೂ ಆಕೆಯನ್ನು ಅನುಸರಿಸಿಸುತ್ತಾನೆ. ಯಾವ ರೊಬೋಗಳ ಯಾವ್ಯಾವ ಅಂಗ ದುರಸ್ತಿಯಾಗಬೇಕು ಎಂಬ ಪಟ್ಟಿಯನ್ನು ಹನ್ನಾ ತನ್ನ ವಾಕಿಯಲ್ಲಿ ರವಾಸುತ್ತಾಳೆ. ಇತ್ತ ಅವಿರತ್ ಹಲವಾರು ತನಿಖಾ ಪ್ರಕರಣಗಳ ಮಧ್ಯೆ ಬಿಡುವು ಮಾಡಿಕೊಂಡು ಒಂದಿಷ್ಟು ಸಮಯ ತನಗೆ ಹಿತವೆನಿಸಿದವರಲ್ಲಿ ಕಳೆಯಲು ತೀರ್ಮಾನಿಸುತ್ತಾನೆ. ಹನ್ನಾಳ ಲವಲವಿಕೆಯ ಓಡಾಟ ನೋಡಿ ಸಮಾಧಾನದ ಉಸಿರು ಬಿಡುತ್ತಾನೆ ಅವಿರತ್. ತನ್ನ ಮಾಮ್ ಅಲಕಾದೇವಿ ಹಸಿವನ್ನು ನೀಗಿಸುವ ಮಾತೆ ಎಂದು ಬಣ್ಣಿಸುತ್ತಾಳೆ ಹನ್ನಾ. ತನ್ನ ಮನೆಗೆ ಬಂದ ಅವಿರತ್‌ಗೆ ಹಾರ್ದಿಕವಾಗಿ ಸತ್ಕಾರ ಮಾಡುತ್ತಾಳೆ ಹನ್ನಾ.

ಕೂಡಲೇ ಹನ್ನಾ ತಮ್ಮ ಸಂಭಾಷಣೆ ಆಲಿಸುತ್ತಿದ್ದ ಪಿ.ಆರ್.ಓ. ಕಡೆ ತಿರುಗಿದಳು. ಅವಳೇನು ಕೇಳಬಹುದೆಂಬುದನ್ನು ಊಹಿಸಿ ಆತ ಡ್ಯೂಟಿಯಲ್ಲಿದ್ದ ವೈದ್ಯರನ್ನು ಆಂತರಿಕ ಸಂಪರ್ಕ ಜಾಲದಲ್ಲಿ ಸಂಪರ್ಕಿಸಿದ್ದ. ನಂತರ ಮತ್ತೆ ಹನ್ನಾಳನ್ನುದ್ದೇಶಿಸಿ ಹೇಳಿದ.

'ಮ್ಯಾಮ್. ಅಪಘಾತ ಹೊಂದಿದ ಮೊದಲ ಒಂದು ಗಂಟೆ ಬಹಳ ಅಮೂಲ್ಯವಾದುದು. ಗಾಯಾಳು ಜೀವನ್ಮರಣದ ನಡುವೆ ಹೋರಾಟ ನಡೆಸುತ್ತಿರುತ್ತಾನೆ. ಏನಾದರೂ ಮಾಡಿ ಆದಷ್ಟು ಬೇಗ ಆ ಪಿತ್ತಜನಕಾಂಗ ಇಲ್ಲಿಗೆ ತಲುಪಲು ದಾರಿ ಸುಗಮಗೊಳಿಸಿ'. ಅವನ ಆತಂಕ ಅರ್ಥವಾಗುವಂತಹದಾಗಿತ್ತು.

ಕ್ಯಾಬಿನ್‌ನ ಗಾಜಿನ ಗೋಡೆಗಳಾಚೆ ಗಾಯಾಳುಗಳ ಸಂಬಂಧಿಕರು ನಿಮಿಷಗಳು ಕಳೆಯುತ್ತಿದ್ದಂತೆ ಉಗ್ರ ರೂಪ ತಳೆಯುತ್ತಿದ್ದುದು ಕಾಣಿಸುತ್ತಿತ್ತು. ಆಗಿಂದಾಗ್ಗೆ ಸ್ವಾಗತಕಾರಣಿಯನ್ನು ಸಂಪರ್ಕಿಸುವುದೂ, ಸ್ವಾಗತಕಾರಣಿ ಪಿ.ಆರ್.ಓ. ಅವರಿಗೆ ಸಂದೇಶ ಕಳುಹಿಸಿ ವಿಚಾರಿಸುವುದು ನಿರಂತರ ಕ್ರಿಯೆಯಾಗಿತ್ತು.

ಹನ್ನಾಳಿಗೆ ಆ ಕ್ಷಣ ಸಂದರ್ಭವನ್ನು ಮೆಲುಕು ಹಾಕುವಾಗ ದಾರಿಯೊಂದು ಹೊಳೆದಿತ್ತು. ಈಗ ಗಾಯಾಳುವಿಗೆ ಪಿತ್ತಜನಕಾಂಗ ಬೇಕಿದೆಯೇ ಹೊರತು ಆಂಬ್ಯುಲೆನ್ಸ್ ಅಲ್ಲವಲ್ಲಾ. ಆದ್ದರಿಂದ ಆಂಬ್ಯುಲೆನ್ಸ್‌ಗಾಗಿ ಪೂರ್ವ ಯೋಜನೆಯಿಲ್ಲದೆ ಕಡೆಯ ಗಳಿಗೆಯಲ್ಲಿ ರಸ್ತೆ ತೆರವುಗೊಳಿಸುವುದು ದುಸ್ತರವೇ ಆಗಿತ್ತು.

'ನಿಮಗೆ ಪಿತ್ತಜನಕಾಂಗ ಕಳುಹಿಸುತ್ತಿರುವ ಆಸ್ಪತ್ರೆಯವರಿಗೆ ಕೂಡಲೇ ಒಂದು ಸೂಪರ್ ಡ್ರೋನ್‌ನ ವ್ಯವಸ್ಥೆ ಮಾಡಿಸುತ್ತೇನೆ. ಆಂಬ್ಯುಲೆನ್ಸ್‌ನಲ್ಲಿರುವ ನರ್ಸ್‌ಗಳು, ಆ ಪಿತ್ತಜನಕಾಂಗವನ್ನು ಮೊದಲು ಸೂಪರ್ ಡ್ರೋನ್‌ನ ಕ್ಯಾರೇಜ್‌ನಲ್ಲಿ ಅಳವಡಿಸಲು ತಿಳಿಸಿ' ಎಂದಾಗ ಕೂಡಲೇ ಕತ್ತಲಿನಲ್ಲಿ ಎಲ್ಲಿಂದಲೋ ಬೆಳಕು ಚಿಮ್ಮಿದಂತಾಗಿತ್ತು.

ಪಿ.ಆರ್.ಓ. ಕೂಡಲೇ ಪಿತ್ತಜನಕಾಂಗ ಕಳುಹಿಸಿದ ಆಸ್ಪತ್ರೆಯ ಜೊತೆ ಸಂಪರ್ಕ ಸಾಧಿಸಿ ಹನ್ನಾಳನ್ನು ವಿಡಿಯೋ ಕಾನ್ಫರೆನ್ಸ್‌ನಲ್ಲಿ ಭಾಗಿಯಾಗಿಸಿದ. ಆ ಪಿತ್ತಜನಕಾಂಗವನ್ನು ಹೊತ್ತೊಯ್ಯುತ್ತಿದ್ದ ಆಂಬ್ಯುಲೆನ್ಸ್‌ನಲ್ಲಿನ ಶುಶ್ರೂಷಕರೂ ಸಂಭಾಷಣೆಯಲ್ಲಿ ಭಾಗಿಯಾಗಿ ಅವರು ನಿರ್ವಹಿಸಬೇಕಾದ ಕೆಲಸವನ್ನೂ ಆಸ್ಪತ್ರೆಯವರಿಂದಲೇ ನಿರ್ದೇಶನವನ್ನು ನೀಡುವುದೂ ಆಗಿತ್ತು.

ಹನ್ನಾಳ ತುರ್ತು ಸಂಪರ್ಕಗಳಿಗೆ ಅವಳ ಎಂ.ಪಿ. ವಾಕಿಯ ಸಹಾಯಕಿ ಆಗಲೇ ಕರೆ ಕಳುಹಿಸಿತ್ತು. ಕೆಲವೇ ನಿಮಿಷಗಳಲ್ಲಿ ಆಂಬ್ಯುಲೆನ್ಸ್ ಬಳಿ ಕೆಂಪು ವರ್ಣದ ಹಾರುವ ವಸ್ತುವೊಂದು ಹೊರಟಿತು. ಅದು ತನ್ನೊಂದಿಗೆ ಒಂದು ಹೊರ ಕವಚವನ್ನು ಹೊತ್ತೊಯ್ದಿದ್ದು, ಆಂಬ್ಯುಲೆನ್ಸ್ ತಲುಪುತ್ತಲೇ ವೈದ್ಯ ಶುಶ್ರೂಷಕ ಅದರಲ್ಲಿದ್ದ ಪಿತ್ತಜನಕಾಂಗವನ್ನು ಆ ಹಾರುವ ವಸ್ತುವಿಗೆ ಅಳವಡಿಸಲು ಅಣಿಯಾಗಿದ್ದರು.

ವಾಯುಮಾರ್ಗದ ಸಂಚಾರ ದಟ್ಟಣೆಯನ್ನಾಗಲೇ ತನ್ನ ಎಂ.ಪಿ. ವಾಕಿಯಲ್ಲಿ ವೀಕ್ಷಿಸಿದ್ದಳು. ಆಂಬ್ಯುಲೆನ್ಸ್ ನಿಂತಿದ್ದ ತಾಣದಿಂದ ವಾಯುಮಾರ್ಗವಾಗಿ ತಾನಿದ್ದ ಆಸ್ಪತ್ರೆಯೆಡೆಗಿನ ಮಾರ್ಗವನ್ನು ಸಂಚಾರ ಮುಕ್ತಗೊಳಿಸಲು ಸಂಬಂಧಪಟ್ಟ ಏರ್ ಟ್ರಾಫಿಕ್ ನಿಯಂತ್ರಣ ಕೇಂದ್ರಕ್ಕೆ ಮಾಹಿತಿಯನ್ನು ರವಾನಿಸಿದ್ದೇ ತಡ, ಆ ಮಾರ್ಗವಾಗಿ ಹೊರಟ ಊಟದ ಪಾರ್ಸೆಲ್ ಹೊತ್ತ ಡ್ರೋನ್‌ಗಳು, ಮಳಿಗೆಗಳಿಂದ ಗಿರಾಕಿಗಳ ಮನೆಗೆ ಅಗತ್ಯ ವಸ್ತುಗಳನ್ನು ಸಾಗಿಸುತ್ತಿದ್ದ ಡ್ರೋನ್‌ಗಳ ಕಾರ್ಯವನ್ನೆಲ್ಲಾ ಸ್ಥಗಿತಗೊಳಿಸುವಂತೆ ಜಾಮರ್ ಸಿಗ್ನಲ್ ಕಳುಹಿಸಲಾಗಿತ್ತು.

ಆಕಾಶವೆಲ್ಲಾ ನೀರವ ವಾತಾವರಣದಲ್ಲಿ ಮುಳುಗಿ ಯಾವುದೋ ಒಂದು ಘನ ಕಾರ್ಯ ಜರುಗುವ ಕ್ಷಣಗಳನ್ನು ಎಣಿಸುತ್ತಿದ್ದಂತಿತ್ತು. ವೈದ್ಯರು ಹಾಗೂ ಶುಶ್ರೂಷಕರೊಂದಿಗೆ ಹನ್ನಾ ಹಾಗೂ ಪಿ.ಆರ್.ಒ. ಆಸ್ಪತ್ರೆಯ ಮಹಡಿಯ ಮೇಲಿದ್ದ ಮೇಲ್ಛಾವಣಿಗೆ ಲಿಫ್ಟ್‌ನಲ್ಲಿ ಸಾಗಿ ಡ್ರೋನ್‌ನ ನಿಲುಗಡೆಗಾಗಿ ಕಾಯತೊಡಗಿದ್ದರು.

'ಓ... ಅಲ್ಲಿ ಬರ್‍ತಿದೆ ನೋಡಿ... ದೂರದಲ್ಲಿ ಹಾರುವ ವಸ್ತುವೊಂದು ಕೆಂಪು ವರ್ಣದಲ್ಲಿ ಕಾಣಿಸಿಕೊಂಡಾಗ ಅಲ್ಲಿ ನೆರೆದವರಲ್ಲಿ ಹರ್ಷ ಮೂಡಿತ್ತು.'

'ನಿಮ್ಮ ಪರಿಶ್ರಮವನ್ನು ಸಾರ್ಥಕಗೊಳಿಸಲು ಅವಕಾಶವೊಂದು ಒದಗಿ ಬಂದಿದೆ ಡಾಕ್ಟರ್. ಇನ್ನು ನೀವು ಕೂಡಲೇ ಕಾರ್ಯ ನಿರತರಾಗಬಹುದು' ಎಂದು ಹನ್ನಾ ಉತ್ಸಾಹದಿಂದ ನೆರೆದಿದ್ದ ವೈದ್ಯರ ತಂಡಕ್ಕೆ ಉತ್ತೇಜನದ ಮಾತನ್ನಾಡಿದಳು.

ಅವರ ಉತ್ಸಾಹ ಆಗಲೇ ಇಮ್ಮಡಿಗೊಂಡಿದ್ದು ಕೂಡಲೇ ಸೂಪರ್ ಡ್ರೋನ್ ಹೊತ್ತು ತಂದ ಪಿತ್ತಜನಕಾಂಗವುಳ್ಳ ಡಬ್ಬಿಯನ್ನು ಕೆಳಗಿದ್ದ ಆಪರೇಷನ್ ಥಿಯೇಟರ್‌ನೆಡೆ ಹೊತ್ತುಕೊಂಡು ಹೋಗಿದ್ದರು. ಇನ್ನು ಆಪರೇಷನ್ ಕೆಲ ಹೊತ್ತಿಗೆ ಪ್ರಾರಂಭವಾಗಲಿದೆ ಎಂದು ಪಿ.ಆರ್.ಒ. ಸುಳಿವು ನೀಡಿದ್ದ.

'ಇನ್ನು ನಾನಿಲ್ಲಿಗೆ ಬಂದ ಉದ್ದೇಶ ಪೂರ್ಣಗೊಂಡಿದೆ. ನಾನಿನ್ನು ಹೊರಡುತ್ತೇನೆ' ಎಂದು ಹನ್ನಾ ತಾನು ಬಂದ ದಾರಿಯಲ್ಲೇ ವಾಪಸ್ಸು ಹೋಗಲು ಅಣಿಯಾದಳು.

'ಮ್ಯಾಮ್. ಇಷ್ಟೊತ್ತು ಇಲ್ಲಿದ್ದು ಆಪರೇಷನ್‌ಗೆ ಅವಕಾಶ ಮಾಡಿಕೊಟ್ಟ ತಾವು ಇನ್ನೂ ಒಂದರ್ಧ ಗಂಟೆ ಇರಲಿಕ್ಕಾಗದೇ...'

'ಯಾಕೆ...?'

'ಆಪರೇಷನ್ ಸಕ್ಸಸ್‌ಫುಲ್ ಅಂಡ್ ಪೇಶೆಂಟ್ ಆಲ್ಸೋ ಲೈವ್ ಅಂಡ್ ಹಾರ್ಟಿ ಆಗಿರುವುದನ್ನು ತಾವು ನೋಡಲು ಬಯಸುವುದಿಲ್ಲವೇ?'

'ಓ... ಶ್ಯೂರ್. ಅರ್ಧ ಗಂಟೆ ತಾನೇ...' ಎಂದವಳೇ ಪಿ.ಆರ್.ಒ.ನನ್ನು ಅನುಸರಿಸಿ ಐ.ಸಿ.ಯು. ಹೊರಗಿದ್ದ ಒಂದು ವೈದ್ಯರ ಕ್ಯಾಬಿನ್‌ಗೆ ನಡೆದಳು. ಅಲ್ಲಿದ್ದ ಒಂದು ಕಂಪ್ಯೂಜೆಕ್ಟರ್‌ನಲ್ಲಿ ಶಸ್ತ್ರಚಿಕಿತ್ಸಾ ಘಟಕದಲ್ಲಿ ನಡೆಯುತ್ತಿದ್ದ ಶಸ್ತ್ರಚಿಕಿತ್ಸೆಯನ್ನು ನೇರವಾಗಿ ವೀಕ್ಷಿಸುವ